**O.S. 298-23** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S M P ವಕೀಲರಿಂದಃ**

4. ನಾನು ಶಾಲೆ ಕಲಿತಿಲ್ಲ. ನನ್ನ ಗಂಡ 10 ನೇ ತರಗತಿವರೆಗೆ ಶಾಲೆ ಕಲಿತಿದ್ದಾನೆ. ನನ್ನ ಗಂಡ ಆಟೋ ಚಾಲಕ. ನಾವು ಗಿರಣಿಚಾಳ, ಹುಬ್ಬಳ್ಳಿಯಲ್ಲಿದ್ದೇವೆ. ಪ್ರತಿವಾದಿಗಳು ಸಹ ಗಿರಣಿಚಾಳದಲ್ಲಿದ್ದಾರೆ. ನಾವು 3 ನೇ ಕ್ರಾಸದಲ್ಲಿದ್ದೇವೆ. ಪ್ರತಿವಾದಿಗಳು 1 ನೇ ಕ್ರಾಸದಲ್ಲಿದ್ದಾರೆ. ಪ್ರತಿವಾದಿ ಹಾಗೂ ಅವರ ಕುಟುಂಬದವರು 20-30 ವರ್ಷಗಳಿಂದ ಪರಿಚಯ. ನನ್ನ ಹಾಗೂ ನನ್ನ ಗಂಡನ ಒಡನಾಟ ಪ್ರತಿವಾದಿ ಜೊತೆಗೆ ಇದೆ ಅಂದರೆ ಸರಿ. ನನ್ನ ಗಂಡ ಹಣಕಾಸಿನ ವ್ಯವಹಾರ ಮಾಡುತ್ತಾರೆ ಅಂದರೆ ಸರಿಯಲ್ಲ. ನಮ್ಮದು 4 ಆಟೋ ಹಾಗೂ ಒಂದು ಕಾರ್ ಇವೆ. ನಮಗೆ 4 ಆಟೋ ಹಾಗೂ ಕಾರ ಇದ್ದ ಬಗ್ಗೆ ದಾವೆಯಲ್ಲಿ ಹೇಳಿಲ್ಲ. ಆಟೋವನ್ನು ನನ್ನ ಗಂಡ ಓಡಿಸುತ್ತಾನೆ ಹಾಗೂ ರಿಪೋರ್ಟಿಂಗ ಕೊಟ್ಟಿರುತ್ತಾರೆ. ದಿನಕ್ಕೆ 500/- ರೂ. ರಂತೆ ಆಟೋ ಕೊಡುತ್ತಿದ್ದೆವು. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಯಲ್ಲಿ ಏನು ಬರೆದಿದೆ ಅಂತಾ ಮಾಹಿತಿ ಇದೆ. ಪ್ರತಿವಾದಿಗಳು ಹೊಲ ಕೊಡುತ್ತೇವೆ ಅಂತಾ ಕೊಡಲಿಲ್ಲ, ಮೋಸ ಮಾಡಿದ್ದಕ್ಕೆ ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿಗಳು ಹೊಲ ಕೊಡುತ್ತೇವೆ ಅಂತಾ ಕೊಡಲಿಲ್ಲ ಅಂತಾ ಹಾಗೂ ಮೋಸ ಮಾಡಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ಪ್ರತಿವಾದಿಗಳ ಹೊಲ ಹಾಗೂ ಮನೆ ಸಲುವಾಗಿ ಕೇಸ ಇದ್ದ ಬಗ್ಗೆ ಗೊತ್ತಿಲ್ಲ. ಪ್ರತಿವಾದಿಗಳ ಕೇಸಿಗೆ ನನ್ನ ಗಂಡ ಪ್ರತಿವಾದಿಗಳ ಜೊತೆ ಕೋರ್ಟಗೆ ಹೋಗುತ್ತಿದ್ದರು ಅಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕೇಸ ನಡೆಸಲು ನನ್ನ ಗಂಡ ಹಣಕಾಸಿನ ಸಹಾಯ ಮಾಡಿದ್ದಾರೆ ಅಂದರೆ ಸರಿಯಲ್ಲ. ಕೇಸ ರಾಜಿಯಾಗುವಾಗ ನನ್ನ ಗಂಡ ಹಣದ ಸಹಾಯ ಮಾಡಿದ್ದಾರೆ ಅಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಪ್ರತಿವಾದಿಗಳ ನಡುವೆ ಒಳ್ಳೆಯ ಮಿತ್ರತ್ವ ಇತ್ತು, ಆ ಕಾರಣದಿಂದ ನನ್ನ ಗಂಡ ಹಣಕಾಸಿನ ಸಹಾಯ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಸದರಿ ಹಣಕಾಸಿನ ಸಹಾಯವನ್ನು ಪ್ರತಿವಾದಿಗಳು ಮರಳಿ ಕೊಡುತ್ತಿದ್ದರು ಅಂದರೆ ಸರಿಯಲ್ಲ. ಸದರಿ ದಾವೆಯಲ್ಲಿರುವ ಹೊಲ ಈ ದಾವೆ ಆಸ್ತಿ ಅಂದರೆ ಸರಿ. ಪ್ರತಿವಾದಿಗಳಿಗೆ ದಾವಾ ಆಸ್ತಿ ಬಿಟ್ಟರೆ ಬೇರೆ ಆಸ್ತಿ ಇಲ್ಲ ಅಂದರೆ ಸರಿ. 1 ನೇ ಪ್ರತಿವಾದಿ ರೇಲ್ವೆ ನೌಕರಿ ಮಾಡಿ ಈಗ ನಿವೃತ್ತಿಗೊಂಡಿದ್ದಾರೆ.

ಪ್ರತಿವಾದಿ 2 ಹಾಗೂ 3 ರವರು 1 ನೇ ಪ್ರತಿವಾದಿಳ ಮಕ್ಕಳು ಅಂದರೆ ಸರಿ. ಪ್ರತಿವಾದಿ 2 ಹಾಗೂ 3 ರವರು ಸಣ್ಣ ಪುಟ್ಟ ಖಾಸಗಿ ಕೆಲಸ ಮಾಡಿಕೊಂಡು ಇದ್ದಾರೆ ಅಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿಯೂ ಜನತಾ ಬಜಾರದಲ್ಲಿ ಅಂಗಡಿ ನಡೆಸುತ್ತಾಳೆ ಅಂದರೆ ಸರಿ. ಕಾಯಿಪಲ್ಲೆ ವ್ಯಾಪಾರ ಮಾಡುತ್ತಾರೆ. ದಾವಾ ಆಸ್ತಿ ಪ್ರತಿವಾದಿಗಳಿಗೆ ಆಶ್ರಯವಾಗಿತ್ತು ಅಂದರೆ ಸರಿ. ನಾನು ಮನೆ ಕೆಲಸ ಮಾಡುತ್ತೇನೆ. ರೊಟ್ಟಿ, ರಾಟಿ ಕೆಲಸ ಹಾಗೂ ಭಾಂಡಿ ಕೆಲಸ ಮಾಡುತ್ತೇನೆ. 1 ತಿಂಗಳಿಗೆ 20 ಸಾವಿರ ರೂ. ದುಡಿಯುತ್ತೇನೆ. ನನಗೆ ಒಬ್ಬ ಮಗಳು ಹಾಗೂ ಒಬ್ಬ ಮಗನಿದ್ದಾನೆ. ಮಕ್ಕಳ ಮದುವೆಯಾಗಿಲ್ಲ. ನನ್ನ ತವರು ಮನೆ ಕುಂದಗೋಳ ತಾಲ್ಲೂಕಿನ ಯರೇಬೂದಿಹಾಳ. ಅಲ್ಲಿ ನನ್ನ ತಾಯಿ ಹಾಗೂಾ ನನ್ನ ಅಣ್ಣ ಇದ್ದಾರೆ. ಹೊಲ ಕೊಟ್ಟಿಲ್ಲವೆಂದು ಕೇಸ ಹಾಕಿದ್ದೇವೆ. 1 ಎಕರೆ ಕೊಡುತ್ತೇವೆ ಅಂತಾ ಹೇಳಿದ್ದರು. ನಾನು ದಾವಾ ಆಸ್ತಿ ನೋಡಿದ್ದೇನೆ. ಚಕ್ಕುಬಂದಿ ಗೊತ್ತಿದೆ. 1 ನೇ ಪ್ರತಿವಾ ನಿವೃತ್ತಿ ಹೊಂದಿ 3 – 4 ವರ್ಷಗಳಾಯಿತು. 1 ನೇ ಪ್ರತಿವಾದಿ 11 ವರ್ಷಗಳ ಹಿಂದೆ ನಿವೃತ್ತಿಯಾಗಿದ್ದಾರೆ. 4 – 5 ವರ್ಷಗಳು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಬನಾವಟಿ ಅಂದರೆ ಸರಿಯಲ್ಲ. ಕರಾರು ಪತ್ರ ನೋಂದಣಿಯಾಗಿಲ್ಲ ಅಂದರೆ ಸರಿಯಲ್ಲ. ದಿಃ 4.10.2016 ರಂದು ಖರೀದಿ ಕರಾರು ಪತ್ರವಾಗಿದೆ. ಕರಾರು ಪತ್ರದಲ್ಲಿ 1 ನೇ ಪ್ರತಿವಾದಿ ವಯಸ್ಸು 62 ಅಂತಾ ತೋರಿಸಿದ್ದು ಗೊತ್ತು. ಕರಾರು ಪತ್ರದಲ್ಲಿ 18 ಲಕ್ಷ ರೂ.ಹಣವನ್ನು ಪ್ರತಿವಾದಿಗಳಿಗೆ ಸಂಚಗಾರ ಅಂತಾ ಕೊಟ್ಟಿದ್ದೇನೆ ಅಂತಾ ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲ. ಕರಾರು ಪತ್ರವಾದ ದಿನ ನನ್ನ ಬಳಿ 18 ಲಕ್ಷ ರೂ. ಹಣ ಇದ್ದ ಬಗ್ಗೆ ದಾಖಲೆ, ಏನು ಹಾಜರಪಡಿಸಿದ್ದೀರಾ ಅಂದರೆ, ಸಾಕ್ಷಿದಾರರು ಇದ್ದರು, ಹಣ ಕೊಟ್ಟ ನಂತರ ಬರೆದುಕೊಟ್ಟಿದ್ದಾರೆಂದು ಹೇಳುತ್ತಾರೆ. ನಾನು 18 ಲಕ್ಷ ರೂ. ಕೊಟ್ಟ ಬಗ್ಗೆ ಕರಾರು ಪತ್ರ ಬಿಟ್ಟರೆ ಬೇರೆ ದಾಖಲೆ ಇಲ್ಲ ಅಂದರೆ ಸರಿ. ನಾನು 4 ಆಟೋ, ಒಂದು ಕಾರ್, ಮತ್ತು ಅಮರಗೋಳದಲ್ಲಿರುವ ಪ್ಲಾಟನ್ನು ಮತ್ತು ಹೆಗ್ಗೇರಿ, ಮಾರುತಿನಗರದಲ್ಲಿರುವ ಮನೆ ಮಾರಾಟ ಮಾಡಿ 18 ಲಕ್ಷ ರೂ. ಇಟ್ಟುಕೊಂಡಿದ್ದೆನು. ಮತ್ತು ಕೈಗಡ ಸಾಲ ತೆಗೆದುಕೊಂಡಿದ್ದೆನು. ಮೇಲೆ ಹೇಳಿದ ಆಟೋ, ಒಂದು ಕಾರ್, ಮತ್ತು ಅಮರಗೋಳದಲ್ಲಿರುವ ಪ್ಲಾಟನ್ನು ಮತ್ತು ಮನೆ ಮಾರಾಟ ಮಾಡಿದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನಾನು ಆಟೋ, ಪ್ಲಾಟ, ಕಾರ್ ಹಾಗೂ ಮನೆ ಮಾರಾಟ ಮಾಡಿದ ಬಗ್ಗೆ ದಾವೆಯಲ್ಲಿ ಹೇಳಿದ್ದೇನೆ. ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ ಹಾಗೂ ದಾವೆಯಲ್ಲಿ ಹೇಳಿಲ್ಲ, ಎಲ್ಲಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**O.S. 298-23** **PW : 1**

ನಿಪಿ.1 ಸಂಚಗಾರ ಪತ್ರವನ್ನು ಪ್ರತಿವಾದಿಗಳು ತಯಾರು ಮಾಡಿದ್ದಾರೆ. ನಾವೆ ತಯಾರು ಮಾಡಿ ಪ್ರತಿವಾದಿಗಳು ತಯಾರು ಮಾಡಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವ್ಯವಹಾರದ ಬಗ್ಗೆ ನನಗೆ ಹಾಗೂ ನನ್ನ ಗಂಡನಿಗೆ ಮಾಹಿತಿ ಇದೆ. ನಾವು 18 ಲಕ್ಷ ರೂ. ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳು ಕರಾರು ಪತ್ರ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ಖರೀದಿ ಕರಾರು ಪತ್ರವನ್ನು ಅನುಕೂಲವಾಗುವ ರೀತಿಯಲ್ಲಿ ತಯಾರು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.